## ದಿನಾಂಕ: 01-05-2020 ರಂದು ನಡೆದ ವಿಪತ್ತು ನಿರ್ವಹಣಾ ಸಮಿತಿಯ ಸಭೆಯ ನಡವಳಿಗಳು

**ಸದಸ್ಯ ಕಾರ್ಯದರ್ಶಿಗಳು ಹಾಗೂ ಸಹಾಯಕ ಕಂದಾಯ ಅಧಿಕಾರಿಗಳಾದ ಶ್ರೀ ಹೆಚ್.ಎಲ್ ಗುರುಪ್ರಸನ್ನ ರವರು ಮಾತಾನಾಡುತ್ತಾ, ಸಭೆಗೆ ಹಾಜರಾದ ಮಾನ್ಯ ಅಧ್ಯಕ್ಷರು, ಸದಸ್ಯರು ಹಾಗೂ ಪಾಲಿಕೆಯ ಅದಿಕಾರಿಗಳು/ವಿವಿಧ ಇಲಾಖೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.**

- ಸದಸ್ಯ ಕಾರ್ಯದರ್ಶಿಗಳು ಮಾತನಾಡುತ್ತಾ ಘನ ಸರ್ಕಾರವು ಕೋವಿಡ್-19ನ್ನು ವಿಪತ್ತು ಎಂದು ಘೋಷಿಸಿದ್ದು, ಅದರಂತೆ ಕೋವಿಡ್-19 ವಿಪತ್ತು ನಿರ್ವಹಣೆಗಾಗಿ ವಾರ್ಡಿನ ಸದಸ್ಯರನ್ನು ವಿಪತ್ತು ನಿರ್ವಹಣಾ ಸಮಿತಿಯ ಅಧ್ಯಕ್ಷರನ್ನಾಗಿ ಹಾಗೂ ವಾರ್ಡ್ ಸಮಿತಿಯ ಸದಸ್ಯರುಗಳು, ಪಾಲಿಕೆಯ ಅಧಿಕಾರಿಗಳು ಮತ್ತು ಇತರೆ ಇಲಾಖೆಗಳ ಅಧಿಕಾರಿಗಳನ್ನು ಸದಸ್ಯರನ್ನಾಗಿ ಆಯ್ಕೆ ಮಾಡಿ ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ ಸಮಿತಿಯನ್ನು ರಚಿಸಿದ್ದು, ಸರ್ಕಾರವು ವಿಪತ್ತು ನಿರ್ವಹಣೆ ಬಗ್ಗೆ ಆಗಾಗ್ಗೆ ಸೂಚಿಸುವ ಕೆಲಸ ಕಾರ್ಯಗಳನ್ನು ಸದರಿ ಸಮಿತಿಯು ಕ್ರಮ ಕೈಗೊಳ್ಳಬೇಕಾಗಿರುತ್ತದೆ ಎಂದು ತಿಳಿಸಿದರು.
- ಮುಂದುವರೆಸುತ್ತಾ, ಇಂದು ಮೇ 01ನೇ ದಿನಾಂಕವಾಗಿದ್ದು, ಕಾರ್ಮಿಕರ ದಿನಾಚರಣೆಯಾಗಿರುತ್ತದೆ. ಅಂದರೆ ಕಾರ್ಮಿಕರ ಹಕ್ಕುಗಳ ಸಂರಕ್ಷಣೆ ಬಗ್ಗೆ ಕಾನೂನು ರಚಿತವಾಗಿದ್ದು, ಈ ಹಿಂದೆ ಪ್ರತಿ ಕಾರ್ಮಿಕನು 16 ರಿಂದ 18 ಗಂಟೆಗಳ ಕಾಲ ಕರ್ತವ್ಯ ನಿರ್ವಹಿಸುತ್ತಿದ್ದು, ಇದರಿಂದ ಕಾರ್ಮಿಕರಿಗೆ ಅನಾನುಕೂಲವಾಗುತ್ತಿದ್ದರಿಂದ, ಕೆಲಸದ ಅವದಿಯನ್ನು ಪ್ರತಿದಿನ 8 ಗಂಟೆಗಳು ಮಾತ್ರ ನೀಡಬೇಕೆಂದು ನ್ಯೂಯಾರ್ಕ್‌ನ ಹೇ ಮಾರ್ಕೆಟ್‌ನಲ್ಲಿ 1886 ರ ಮೇ-01 ರಂದು ಹಕ್ಕು ಪ್ರತಿಭಟನೆ ಮಾಡಿದ ನೆನಪಿಗಾಗಿ ಕಾರ್ಮಿಕ ದಿನಾಚರಣೆಯಾಗಿ ಆಚರಿಸುತ್ತಿರುವುದಾಗಿ ತಿಳಿಸುತ್ತಾ ಎಲ್ಲಾ ಕಾರ್ಮಿಕರಿಗೆ ಶುಭಾಷಯಗಳನ್ನು ತಿಳಿಸಿ ಪಾಲಿಕೆಯ ಪೌರಕಾರ್ಮಿಕರಿಗೆ ಸಿಹಿ ಹಂಚಿ ಕಾರ್ಮಿಕ ದಿನಾಚರಣೆಯನ್ನು ಆಚರಿಸಲಾಯಿತು.
- ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಕೋವಿಡ್-19 ಬಂದಮೇಲೆ ಏನೆಲ್ಲಾ ಜನರಿಗೆ ಸಮಸ್ಯೆಗಳಾಗಿವೆ ಎಂಬುದರ ಬಗ್ಗೆ ತಿಳಿಸುವಂತೆ ಅಂಗನವಾಡಿ ಕಾರ್ಯಕರ್ತೆಯರಿಗೆ ತಿಳಿಸಿದರು.
- ಬಾಬಾ ನಗರದ ಅಂಗನವಾಡಿ ಕಾರ್ಯಕರ್ತೆಯು ಮಾತಾನಾಡುತ್ತಾ, ಬಾಬಾ ನಗರ ವ್ಯಾಪ್ತಿಯಲ್ಲಿ ಕೆಲವು ಕಾರ್ಮಿಕರಿಗೆ ಊಟದ ಸಮಸ್ಯೆ ಇದ್ದು, ಅದನ್ನು ಸರಿಪಡಿಸುವಂತೆ ಮಾನ್ಯ ಅಧ್ಯಕ್ಷರಲ್ಲಿ ಕೋರಿದರು.

➢ ವಿನಾಯಕ ನಗರದ ಅಂಗನವಾಡಿ ಕಾರ್ಯಕರ್ತೆಯು ಮಾತನಾಡುತ್ತಾ
ನಗರದಲ್ಲಿ, ಮಾಸ್ಕ್ ಹಾಕದೇ ಸಾರ್ವಜನಿಕರು ಸಂಚರಿಸುತ್ತಿದ್ದು, ಕ್ರಮ ಕೈಗೊಳ್ಳುವಂತೆ
ಮಾನ್ಯ ಅಧ್ಯಕ್ಷರಲ್ಲಿ ಕೋರಿದರು.

ಮಾನ್ಯ ಅಧ್ಯಕ್ಷರು ಮಾತಾನಾಡುತ್ತಾ ಧ್ವನಿ
➢ ಸದರಿ ವಿಷಯಗಳಿಗೆ ಸಂಬಧಿಸಿದಂತೆ ಮಾನ್ಯ ಅಧ್ಯಕ್ಷರು ಮಾತಾನಾಡುತ್ತಾ ಧ್ವನಿ ಹಾಕದೇ ಸಾರ್ವಜನಿಕರು
ವರ್ಧಕಗಳ ಮೂಲಕ ಪ್ರಚಾರ ಮಾಡುವಂತೆ, ಮಾಸ್ಕ್ ಹಾಕದೇ ಸಾರ್ವಜನಿಕರು
ಸಂಚರಿಸುತ್ತಿದ್ದರೆ ದಂಡ ವಿಧಿಸಲು ಈಗಾಗಲೇ ಪಾಲಿಕೆಯಿಂದ ಆದೇಶ
ಹೊರಡಿಸಲಾಗಿರುತ್ತದೆ ಎಂದು ತಿಳಿಸಿದರು. ಮುಂದುವರೆಸುತ್ತಾ, ಊಟ ಅಥವಾ ಆಹಾರ
ಕಿಟ್ ಸಿಗದೇ ಇರುವ ಕಾರ್ಮಿಕರ ಪಟ್ಟಿಯನ್ನು ನೀಡಿದ್ದಲ್ಲಿ ಸದರಿಯವರಿಗೆ ಕಿಟ್ ತಲುಪಿಸಲು
ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

➢ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಕೋವಿಡ್-19 ಬಂದ ಮೇಲೆ ಕಸದ ಸಮಸ್ಯೆಯು
ಶೇ. 60 ರಷ್ಟು ಕಡಿಮೆಯಾಗಿದ್ದು, ಸ್ವಚ್ಛತೆಯ ಬಗ್ಗೆ ಬೇರೆ ಬೇರೆ ಕ್ರಮಗಳನ್ನು ತೆಗೆದುಕೊಳ್ಳಲು
ಇದು ಸರಿಯಾದ ಸಮಯವಾಗಿದ್ದು, ಕ್ರಮ ತೆಗೆದುಕೊಳ್ಳುವಂತೆ ಆರೋಗ್ಯ ಶಾಖೆಗೆ
ತಿಳಿಸಿದರು. ಮುಂದುವರೆಸುತ್ತಾ ಸಾರ್ವಜನಿಕರು ಸ್ವದೇಶಿ ವಸ್ತುಗಳನ್ನೇ ಉಪಯೋಗಿಸದರೆ
ನಮ್ಮ ದೇಶದ ವಸ್ತುಗಳಿಗೆ ಬೇಡಿಕೆ ಹೆಚ್ಚಾಗಿ ಸ್ವದೇಶದ ಆದಾಯವು ಹೆಚ್ಚಾಗಿ ದೇಶವು
ಸ್ವಾವಲಂಬಿಯಾಗಲು ಅನುಕೂಲವಾಗುತ್ತದೆ ಎಂದು ತಿಳಿಸಿದರು. ಹಾಗೂ ಹಜ್ ಭವನದಲ್ಲಿ
ಕ್ವಾರಂಟೈನ್ ಮಾಡಿರುವುದರ ಬಗ್ಗೆ ಮಾಹಿತಿ ನೀಡುವಂತೆ ಆರೋಗ್ಯ ವೈದ್ಯಾಧಿಕಾರಿಗಳಿಗೆ
ತಿಳಿಸಿದರು.

ವೈದ್ಯಾಧಿಕಾರಿಗಳಾದ ಡಾ॥ ಶ್ರೀ. ಮುರಳಿ ರವರು
➢ ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿಗಳಾದ ಡಾ॥ ಶ್ರೀ. ಮುರಳಿ ರವರು ಕರೆತಂದಿದ್ದು, 115
ಮಾತನಾಡುತ್ತಾ, ರಾಮನಗರದಿಂದ 134 ಜನರನ್ನು ಕ್ವಾರಂಟೈನ್‌ಗಾಗಿ ಕರೆತಂದಿದ್ದು, 115
ಜನರಿಗೆ ಪರೀಕ್ಷೆ ಮಾಡಿಸಿದ್ದು, ಅದರಲ್ಲಿ ಒಬ್ಬ ವ್ಯಕ್ತಿಗೆ ಪಾಸಿಟೀವ್ ಬಂದಿದ್ದು, ಅವನನ್ನು
ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಗಿರುತ್ತದೆ. ಸದರಿ ವ್ಯಕ್ತಿಯ ಜೊತೆಯಲ್ಲಿ ಇಬ್ಬರಿದ್ದು
ಅವರನ್ನು ಪ್ರೈಮರಿ ಕಾಂಟ್ಯಾಕ್ಟ್ ಎಂದು ಪರಿಗಣಿಸಿ ಅವರನ್ನು ಇ.ಡಿ ಆಸ್ಪತ್ರೆಗೆ
(ಇಂದಿರಾನಗರ) ಕಳುಹಿಸಲಾಗಿದೆ. ಇನ್ನೊಬ್ಬರಿಗೆ ಕೆಮ್ಮು, ಜ್ವರ ಇದ್ದು, ಪರೀಕ್ಷಿಸಲಾಗಿ
ನೆಗಟೀವ್ ಬಂದಿರುತ್ತದೆ. ಉಳಿದವರನ್ನು ಪರೀಕ್ಷೆಗೆ ಕಳುಹಿಸಲಾಗಿರುತ್ತದೆ ಸದರಿಯವರುಗಳು
ಕೇರಳ, ಕಿರ್ಗಿಸ್ತಾನ್, ಹಾಗೂ ಬೇರೆ ಬೇರೆ ಸ್ಥಳಗಳಿಂದ ಬಂದಿರುವವರಾಗಿರುತ್ತಾರೆ ಎಂದು
ತಿಳಿಸಿದರು.

➢ ವಾರ್ಡಿನ ನಾಗರೀಕರಾದ ಶ್ರೀ. ಅಶ್ವತ್ಥ ರವರು ಮಾತನಾಡುತ್ತಾ, ಹಜ್ ಭವನದಲ್ಲಿ ಕಸ
ವಿಲೇವಾರಿ ತೊಂದರೆಯಾಗುತ್ತಿದ್ದು, ಇನ್ನೊಂದು ಆಟೋವನ್ನು ನೀಡುವಂತೆ ಮಾನ್ಯ
ಅಧ್ಯಕ್ಷರಲ್ಲಿ ಕೋರಿದರು.

➢ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಹಜ್ ಭವನಕ್ಕೆ ಇನ್ನೊಂದು ಆಟೋ ವ್ಯವಸ್ಥೆ ಮಾಡಿ
ದರ ಪಟ್ಟಿಯನ್ನು ಡಿಸಿ ಬಿಲ್ ಮುಖಾಂತರ ಭರಿಸುವಂತೆ ಸಹಾಯಕ ಕಾರ್ಯಪಾಲಕ

ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ರವರಿಗೆ ಸೂಚಿಸಿದರು ಹಾಗೂ ವಾರ್ಡಿನಲ್ಲಿ 3ನೇ ದಿನಾಂಕದವರೆಗೆ ಊಟದ ವ್ಯವಸ್ಥೆಯನ್ನು ಸಹ ಮಾಡಲಾಗಿದ್ದು, 5 ರಿಂದ 6ನೇ ದಿನಾಂಕದವರೆಗೆ ರೇಷನ್ ಕಿಟ್‌ಗಳನ್ನು ನೀಡುವುದಾಗಿ ಹಾಗೂ ಸಾಮಾಜಿಕ ಅಂತರದ ಸಮಸ್ಯೆಯಿಂದ ಹಾಲು ನೀಡುವುದನ್ನು ಇಂದಿನಿಂದ ನಿಲ್ಲಿಸಲಾಗಿದೆ ಎಂದು ತಿಳಿಸಿದರು.

➢ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಪಾಲಿಕೆಗೆ ಹಿಂದಿನ ಸಾಲುಗಳಲ್ಲಿ, ಏಪ್ರಿಲ್ ಮಾಹೆಯಲ್ಲಿ 700 ರಿಂದ 800 ಕೋಟಿ ತೆರಿಗೆ ಸಂಗ್ರಹವಾಗುತ್ತಿದ್ದು, ಈಗ ಅದು ಕೋವಿಡ್-19 ಸೋಂಕುವಿನಿಂದಾಗಿ 100 ರಿಂದ 150 ಕೋಟಿ ಮಾತ್ರ ಸಂಗ್ರಹವಾಗಿರುತ್ತದೆ. ಹಾಗೂ 110 ಹಳ್ಳಿಗಳಲ್ಲಿ ರಸ್ತೆಗಳು ತುಂಬಾ ಕೆಟ್ಟಿದ್ದು, ಅವುಗಳನ್ನು ಕೂಡಲೇ ದುರಸ್ಥಿ ಕಾರ್ಯ ಕೈಗೊಂಡು ಸರಿಪಡಿಸುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ಉಪ ವಿಭಾಗ ರವರಿಗೆ ಸೂಚಿಸಿದರು. ಜಕ್ಕೂರಿನ ಕಡೆಗೆ ಹೋಗಲು ಬದಲಿ ರಸ್ತೆಗೆ ಕೂಡಲೇ ಕಾಮಗಾರಿಯನ್ನು ತೆಗೆದುಕೊಳ್ಳುವಂತೆ ಸೂಚಿಸಿದರು.

➢ ಸಮಿತಿಯ ಸದಸ್ಯರಾದ ಶ್ರೀ. ಚೇತನ್ ರವರು ಮಾತನಾಡುತ್ತಾ, ಜಕ್ಕೂರಿನ ರೈಲ್ವೆ ಗೇಟಿನ ಹತ್ತಿರ ಬದಲಿ ರಸ್ತೆಯನ್ನು ಕೂಡಲೇ ನಿರ್ಮಿಸಿಕೊಡುವಂತೆ ಮಾನ್ಯ ಅಧ್ಯಕ್ಷರಲ್ಲಿ ಕೋರಿದರು.

➢ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಅಧ್ಯಕ್ಷರು ಮಾತಾನಾಡುತ್ತಾ, ಈ ವಿಷಯದ ಬಗ್ಗೆ ಈಗಾಗಲೇ ಅಧಿಕಾರಿಗಳ ಜೊತೆ ಚರ್ಚಿಸಿದ್ದು, ಕ್ರಮಕೈಗೊಳ್ಳುತ್ತಿರುವುದಾಗಿ ತಿಳಿಸಿದರು.

➢ ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಬೀದಿ ಬದಿಯಲ್ಲಿರುವವರನ್ನು ಸಮೀಕ್ಷೆ ಮೂಲಕ ಗುರ್ತಿಸುವಂತೆ ಸರ್ಕಾರಿ ಶಾಲೆಗಳ ಶಿಕ್ಷಕರು/ಶಿಕ್ಷಕಿಯರುಗಳಿಗೆ ಹಾಗೂ ಅಂಗನವಾಡಿ ಕಾರ್ಯಕರ್ತೆಯರುಗಳಿಗೆ ತಿಳಿಸಿದರು. ಮುಂದುವರೆಸುತ್ತಾ, ಕಟ್ಟಿಗೇನಹಳ್ಳಿ ಪಂಚಾಯಿತಿ ಹತ್ತಿರ ಟ್ಯಾಂಕ್ ಇದ್ದು, ಅದು ಬಿದ್ದು ಹೋಗುತ್ತಿದ್ದು ಅದನ್ನು ಸರಿಪಡಿಸುವಂತೆ ತಿಳಿಸಿದರು.

➢ ಸದಸ್ಯ ಕಾರ್ಯದರ್ಶಿಗಳು ಹಾಗೂ ಸಹಾಯಕ ಕಂದಾಯ ಅಧಿಕಾರಿಗಳಾದ ಶ್ರೀ ಹೆಚ್.ಎಲ್ ಗುರುಪ್ರಸನ್ನ ರವರು ಸಭೆಗೆ ಹಾಜರಾದ ಮಾನ್ಯ ಅಧ್ಯಕ್ಷರು, ಸದಸ್ಯರು ಹಾಗೂ ಪಾಲಿಕೆಯ ಅದಿಕಾರಿಗಳು/ವಿವಿಧ ಇಲಾಖೆಯ ಅಧಿಕಾರಿಗಳು/ನೌಕರರಿಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

/05/2020

ಕಾರ್ಯದರ್ಶಿಗಳು
ವಿಪತ್ತು ನಿರ್ವಹಣಾ ಸಮಿತಿ
ಸಹಾಯಕ ಕಂದಾಯ ಅಧಿಕಾರಿ
ಹಾಗೂ ಸಹಾಯಕ ಕಂದಾಯ ಅಧಿಕಾರಿ ಜಕ್ಕೂರು
ಮಹಾನಗರ ಪಾಲಿಕೆ
ಬೆಂಗಳೂರು - 560 077

ಅಧ್ಯಕ್ಷರು
K.A. MUNINDRA KUMAR
ವಿಪತ್ತು ನಿರ್ವಹಣಾ ಸಮಿತಿ
Corporator
ಹಾಗೂ [illegible] ಆಡಳಿತ
ಪಕ್ಷದ ನಾಯಕರು ವಾರ್ಡ್ ನಂ: 5, ಜಕ್ಕೂರು